

# ಕಥೆಗಾರ ಸೂರಜ್!

■ ಪದ್ಮನಾಭ ಭಟ್

‘ನನಗೆ ಪ್ಲ್ಯಾನ್ ‘ಬಿ’ ಅನ್ನೋದು ಇಲ್ಲವೇ ಇಲ್ಲ. ನನ್ನ ಪ್ಲ್ಯಾನ್ ‘ಎ’ ಸಿನಿಮಾ. ಪ್ಲ್ಯಾನ್ ಬಿ, ಸಿ ಎಲ್ಲವೂ ಸಿನಿಮಾ ಸಿನಿಮಾ ಮತ್ತು ಸಿನಿಮಾ ಮಾತ್ರ!’ ಹೀಗೆ ಖಡಾಖಂಡಿತವಾಗಿ ಹೇಳುತ್ತಲೇ ತಮ್ಮ ಸಿನಿಮಾ ಪ್ರೀತಿಯ ಹಲವು ಆಯಾಮಗಳನ್ನು ಬಿಚ್ಚಿಡುತ್ತಾ ಹೋದರು ಸೂರಜ್ ಗೌಡ.

‘ಮದುವೆಯ ಮಮತೆಯ ಕರೆಯೋಲೆ’ ಸಿನಿಮಾದ ಮೂಲಕ ನಾಯಕನಟನಾಗಿ ಪರಿಚಿತರಾದ ಸೂರಜ್ ಗೌಡ ನಂತರ ‘ಕಹಿ’, ‘ಸಿಲಿಕಾನ್ ಸಿಟಿ’ ಸಿನಿಮಾಗಳಲ್ಲಿಯೂ ತಮ್ಮ ನಟನೆಯಿಂದ ಗಮನಸೆಳೆದರು. ಇದೀಗ ಅವರು ಹೊಸದೊಂದು ಸಿನಿಮಾದ ಸಿದ್ಧತೆಯಲ್ಲಿದ್ದಾರೆ. ವಿಶೇಷ ಎಂದರೆ ಈ ಚಿತ್ರಕ್ಕೆ ಕಥೆ ಬರೆದಿರುವುದೂ ಅವರೇ.

‘ನಟನೆಯಲ್ಲಿ ಮುಳುಗಿದ್ದವರಿಗೆ ಕಥೆ ಬರೆಯಬೇಕು ಎಂದು ಯಾಕೆ ಅನಿಸಿತು’ ಎಂದು ಕೇಳಿದರೆ, ‘ಕಥೆ ಅಂತಲ್ಲ, ಸಿನಿಮಾದ ಎಲ್ಲ ವಿಭಾಗಗಳ ಬಗ್ಗೆಯೂ ತಿಳಿದುಕೊಳ್ಳಬೇಕು ಎನ್ನುವುದು ನನ್ನ ಆಸೆ. ಸೃಜನಶೀಲ ಮನಸ್ಸಿರುವ ಮನುಷ್ಯನಿಗೆ ಹೊಸ ಬಗೆಯ ಕೆಲಸದಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳಬೇಕು ಎಂದು ಅನಿಸುವುದು ಸಹಜ. ನಾನು ಚಿಕ್ಕಂದಿನಿಂದಲೂ ಕಥೆಗಳನ್ನು ಕೇಳಿಕೊಳ್ಳುತ್ತಲೇ ಬೆಳೆದವನು. ಅವುಗಳ ಬಗ್ಗೆ ಯೋಚಿಸುತ್ತಿದ್ದೆ. ಹೀಗೆಯೇ ಒಂದು ಕಥೆಯ ಎಳೆ ಹೊಳೆದು ಸ್ನೇಹಿತರೊಂದಿಗೆ ಹಂಚಿಕೊಂಡೆ. ಎಲ್ಲರಿಗೂ ತುಂಬ ಇಷ್ಟವಾಯ್ತು’ ಎಂದು ಬರವಣಿಗೆಗೆ ತೊಡಗಿಕೊಂಡ ಕುರಿತು ವಿವರಿಸುತ್ತಾರೆ ಸೂರಜ್.

ಇನ್ನೂ ಹೆಸರು ಅಂತಿಮಗೊಳ್ಳದ ಈ ಚಿತ್ರದಲ್ಲಿ ಸರಳವಾದ ಪ್ರೇಮಕಥೆಯೊಂದನ್ನು ಅಸಾಮಾನ್ಯ ರೀತಿಯಲ್ಲಿ ಹೇಳುವ ಪ್ರಯತ್ನ ಮಾಡಿದ್ದಾರಂತೆ ಸೂರಜ್. ಅವರ ಕಥೆಯನ್ನು ತೆರೆಯ ಮೇಲೆ ಮರುಸೃಷ್ಟಿಸುವ ಹೊಣೆಯನ್ನು ಸುಮನ್ ಜಾದೂಗಾರ್ ವಹಿಸಿಕೊಂಡಿದ್ದಾರೆ.

> ಅಭಿನಯಿಸಿದ ಕೆಲವೇ ಸಿನಿಮಾಗಳಲ್ಲಿ ಭರವಸೆ ಹುಟ್ಟಿಸಿರುವ ಸೂರಜ್ ಗೌಡ ಈಗ ಬರವಣಿಗೆಯಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇದರಿಂದ ತಮ್ಮ ನಟನೆಗೂ ಸಾಕಷ್ಟು ಸಹಾಯವಾಗುತ್ತದೆ ಎಂಬ ನಂಬಿಕೆ ಅವರದ್ದು.

‘ಸುಮನ್ ಜಾದೂಗಾರ್ ಅತ್ಯದ್ಭುತ ತಂತ್ರಜ್ಞ. ಸಿಲಿಕಾನ್ ಸಿಟಿ ಸಿನಿಮಾದಲ್ಲಿ ಅವರು ಸಹನಿರ್ದೇಶಕರಾಗಿ ಕೆಲಸ ಮಾಡಿದ್ದರು. ನಾವಿಬ್ಬರೂ ಅಲ್ಲಿ ಒಳ್ಳೆಯ ಸ್ನೇಹಿತರಾದೆವು. ನಾನು ಕಥೆ ಬರೆಯುತ್ತಿದ್ದಾಗಲೂ ನನ್ನ ಮನಸಲ್ಲಿ ಇವರೇ ನಿರ್ದೇಶನ ಮಾಡಬೇಕು ಎಂದಿತ್ತು. ಅವರಿಗೆ ಕಥೆ ಹೇಳಿದಾಗ ತಮ್ಮ ಕೆಲವು ಪ್ರಾಜೆಕ್ಟ್ ಅನ್ನೂ ಕೈಬಿಟ್ಟು ಈ ಕಥೆಯನ್ನು ನಿರ್ದೇಶಿಸಲು ಒಪ್ಪಿಕೊಂಡರು’ ಎಂದು ಸೂರಜ್ ಮೆಚ್ಚುಗೆಯಿಂದ ಹೇಳುತ್ತಾರೆ.

ನಟನೆಯೇ ಜೀವ ಎನ್ನುವ ಸೂರಜ್‌ಗೆ ಸಂಗೀತದ ಗಂಧವೂ ಇದೆ. ಶಾಸ್ತ್ರೀಯ ಸಂಗೀತವನ್ನು ಅವರು ಕೆಲವು ಕಾಲ ಅಭ್ಯಾಸ ಮಾಡಿದ್ದರು. ಈ ಎಲ್ಲ ಪ್ರತಿಭೆಯನ್ನೂ ಅವರು ಬಳಸಿಕೊಳ್ಳುವುದು ಮಾತ್ರ ಸಿನಿಮಾಗೆ ಪೂರಕವಾಗಿಯೇ. ‘ಯಾವಾಗಲೂ ನನ್ನ ತಲೆಯಲ್ಲಿ ಸಿನಿಮಾ ಕುರಿತ ಆಲೋಚನೆಗಳೇ ಓಡುತ್ತಿರುತ್ತದೆ. ಹಾಗಾಗಿಯೇ ನನಗೆ ಕಥೆ ಬರೆಯಲೂ ಸಾಧ್ಯವಾಗಿದ್ದು’ ಎನ್ನುವುದು ಅವರ ಅಂಬೋಣ.

ತಾವು ಸೃಷ್ಟಿಸಿದ ಪಾತ್ರದಲ್ಲಿ ತಾನೇ ನಟಿಸುತ್ತಿರುವ ಪುಳಕ ಅವರನ್ನು ಆವರಿಸಿಕೊಂಡಿದೆ. ಈ ಚಿತ್ರದಲ್ಲಿ ಅವರ ಜತೆಗೆ ರಾಜ್ ಮೊಮ್ಮಗಳು, ರಾಮ್‌ಕುಮಾರ್ ಮತ್ತು ಪೂರ್ಣಿಮಾ ಅವರ ಮಗಳು ಧನ್ಯಾ ರಾಮ್‌ಕುಮಾರ್ ನಾಯಕಿಯಾಗಿ ನಟಿಸುತ್ತಿರುವುದು ಇನ್ನೊಂದು ವಿಶೇಷ. ಅವರೂ ಈ ಕಥೆಯನ್ನು ಕೇಳಿ ತುಂಬಾ ಖುಷಿಪಟ್ಟಿದ್ದಾರಂತೆ.

‘ಸಾಮಾನ್ಯವಾಗಿ ಕಲಾವಿದರು ತಮಗೆ ಬಂದ ಅವಕಾಶಗಳಲ್ಲಿ ಒಳ್ಳೆಯದನ್ನು ಆಯ್ದುಕೊಳ್ಳಬೇಕಾಗುತ್ತದೆ. ಹಾಗಿದ್ದೂ ಒಂದು ಸಿನಿಮಾ, ಕಲಾವಿದನ ನಿಯಂತ್ರಣದಲ್ಲಿ ಇರುವುದಿಲ್ಲ. ಅದು ನಿರ್ದೇಶಕನ ಕಲ್ಪನೆಯಲ್ಲಿ ಜೀವಪಡೆಯುತ್ತಿರುತ್ತದೆ. ಆದರೆ ಈ ಚಿತ್ರಕ್ಕೆ ನಾನೇ ಕಥೆ ಬರೆದಿರುವುದರಿಂದ ಆ ಪಾತ್ರವನ್ನು ಈಗಾಗಲೇ ನಾನು ಅನುಭವಿಸಿಬಿಟ್ಟಿದ್ದೇನೆ. ಹಾಗಾಗಿ ಈ ಚಿತ್ರದಲ್ಲಿ ನನ್ನ ಹಿಂದಿನ ಎಲ್ಲ ಸಿನಿಮಾಗಳಿಗಿಂತ ಹೆಚ್ಚಿನ ಪಕ್ವ ಅಭಿನಯ ನೀಡುವುದು ಸಾಧ್ಯ ಎಂದು ನಂಬಿದ್ದೇನೆ’ ಎನ್ನುವ ಸೂರಜ್, ನಿರ್ದೇಶನದ ಚುಕ್ಕಾಣಿ ಹಿಡಿಯಲು ಮಾತ್ರ ಕೊಂಚ ಹಿಂಜರಿಯುತ್ತಾರೆ.

‘ನಿರ್ದೇಶನ ಅತ್ಯಂತ ಕಷ್ಟದ ಕೆಲಸ. ನಾನು ಈಗ ನಟ. ನಟನಾಗಿ ಗೆಲ್ಲಬೇಕು. ಹೆಸರು ಮಾಡಬೇಕು. ನಂತರ ನಿರ್ದೇಶನದ ಕುರಿತು ಯೋಚಿಸಬಹುದಷ್ಟೆ’ ಎಂದು ಸ್ಪಷ್ಟವಾಗಿ ನುಡಿಯುವ ಸೂರಜ್ ಹೊಸ ಸಿನಿಮಾದ ಚಿತ್ರೀಕರಣವನ್ನು ಜುಲೈನಲ್ಲಿ ಆರಂಭಿಸುವ ಯೋಜನೆ ಹಾಕಿಕೊಂಡಿದ್ದಾರೆ. ■